ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 12-03-2021 ಪ್ರಶ್ನೆ ಸಂಖ್ಯೆ : 160 (1147)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 12-03-2021

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ವಿಷಯ : ರಾಜ್ಯದ ಕಾಫಿ ಬೆಳೆಗಾರರಿಗೆ ಸಿಗುತ್ತಿರುವ ಸವಲತ್ತುಗಳ ಬಗ್ಗೆ

(ಅ) ರಾಜ್ಯದ ಕಾಫಿ ಬೆಳೆಗಾರರಿಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಕೇಂದ್ರ ಕಾಫಿ ಮಂಡಳಿಯಿಂದ ದೊರೆಯುತ್ತಿರುವ ಸಹಾಯ ಧನ, ಪ್ರೋತ್ಸಾಹ ಧನ, ಸಾಲ ಹಾಗೂ ಇತರೇ ಸೌಲಭ್ಯಗಳೇನು; (ಸಂಪೂರ್ಣ ಹಾಗೂ ವಿವರವಾದ ಮಾಹಿತಿಯನ್ನು ನೀಡುವುದು)

(ಆ) ರಾಜ್ಯದ ಕಾಫಿ ಬೆಳೆಗಾರರಿಗೆ 2017-18 ರಿಂದ 2019-20 ರವರೆಗೆ ಈ ಎಲ್ಲಾ ರೀತಿಯ ಸಹಾಯ ಧನ, ಪ್ರೋತ್ಸಾಹ ಧನ, ಸಾಲ ಹಾಗೂ ಇತರೆ ಸೌಲಭ್ಯಗಳ ಮೂಲಕ ದೊರೆತಿರುವ ಆರ್ಥಿಕ ನೆರವಿನ ವಿವರಗಳೇನು; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಎಲ್ಲಾ ಸೌಲಭ್ಯಗಳನ್ನು 2020-21ನೇ ಆರ್ಥಿಕ ವರ್ಷದಲ್ಲೂ ಸಂಪೂರ್ಣವಾಗಿ ನೀಡಲಾಗಿದೆಯೇ ಅಥವಾ ಕೆಲವು ಸೌಲಭ್ಯಗಳನ್ನು ರದ್ದುಪಡಿಸಲಾಗಿದೆಯೇ; ರದ್ದುಪಡಿಸಿದ್ದಲ್ಲಿ ಅದಕ್ಕೆ ಕಾರಣಗಳೇನು?